ಸಾಕ್ಷಿಯನ್ನು ದಿಃ 20.03.2025 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು

**ಪಾಟೀ ಸವಾಲುಃ** ಎದುರುದಾರರ ಪರ ವಕೀಲರಿಂದಃ

1. ಲಕ್ಷ್ಮಿಪುರ ಗ್ರಾಮದ ಸರ್ವೆ ನಂಬರ್179/ 2 ರಲ್ಲಿ ಒಟ್ಟು 8 ಗುಂಟೆ ಜಮೀನು ಇದೆ. ಈ ಪೈಕಿ 0.04 ಗುಂಟೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. ಈ ಜಮೀನು ನಮ್ಮ ತಾಯಿ ಕರಗಮ್ಮನಿಗೆ ಸೇರಿದ್ದು. ಭೂ ಸುಧಾರಣೆ ಆದೇಶದ ಮೇರೆಗೆ ನಮ್ಮ ತಾಯಿಗೆ ಬಂದಿರುತ್ತದೆ. ಭೂ ಸುಧಾರಣೆ ಆದೇಶದ ಮೇರೆಗೆ ನಮ್ಮ ತಾಯಿ ಈ ಜಮೀನಿನ ಮಾಲಿಕರು ಎಂದು ತೋರಿಸಲು ದಾಖಲೆಯನ್ನು ಕೊಟ್ಟಿರುವುದಿಲ್ಲ. ಅಂತೆಯೇ ನಮ್ಮ ತಾಯಿ ಹೆಸರಿಗೆ ಖಾತೆ ಇದೆ ಎಂದು ತೋರಿಸಲು RTC ಯನ್ನು ಸಹ ಕೊಟ್ಟಿರುವುದಿಲ್ಲ.

2. 2012 ರಲ್ಲಿ ಈ 0.04 ಗುಂಟೆ ಜಮೀನನ್ನು ಸ್ವಾಧೀನ ಪಡಿಸಿಕೊಂಡಿರುತ್ತಾರೆ. ನಿಖರವಾದ ದಿನಾಂಕ ಮತ್ತು ತಿಂಗಳು ಗೊತ್ತಿಲ್ಲ. ಈ ಸ್ವಾಧೀನಪಡಿಸಿಕೊಂಡ ಜಮೀನಿಗೆ 3 ಲಕ್ಷ ಚಿಲ್ಲರೆ ಪರಿಹಾರದ ಹಣ ಬಂದಿರುತ್ತದೆ. ಯಾವಾಗ ಬಂದಿರುತ್ತದೆ ಎನ್ನುವುದು ನನಗೆ ಗೊತ್ತಿಲ್ಲ. ಅ ಪರಿಹಾರದ ಹಣವನ್ನು ನಾನೇ ಪಡೆದುಕೊಂಡಿರುತ್ತೇನೆ. ಈ ಪರಿಹಾರದ ಹಣವನ್ನು ಪಡೆದುಕೊಂಡ 30 ದಿನದ ಒಳಗೆ ನಾನು ಅರ್ಜಿಯನ್ನು ಸಲ್ಲಿಸಿರುತ್ತೇನೆ. ಅ ಅರ್ಜಿಯ ನಕಲನ್ನು ಈ ಕೇಸಿನಲ್ಲಿ ನಾನು ಸಲ್ಲಿಸಿದ್ದೇನೆ.

3. ಪರಿಹಾರ ಹಣವನ್ನು ಪಡೆದುಕೊಂಡ 30 ದಿನದೊಳಗೆ ನಾನು ತಕರಾರು ಅರ್ಜಿಯನ್ನು ಭೂ ಸ್ವಾಧೀನ ಅಧಿಕಾರಿಗೆ ಕೊಟ್ಟಿದ್ದೇನೆ. ಅ ರೀತಿಯಾಗಿ ನಾನು ಯಾವುದೇ ತಕರಾರು ಅರ್ಜಿಯನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ದಿಃ 31.07.2018 ರಂದು ಮತ್ತು ದಿಃ 13.05.2019 ರಂದು ನಾನು ಅರ್ಜಿಗಳನ್ನು ಕೊಟ್ಟಿರುತ್ತೇನೆ ಎಂದರೆ ಸರಿ. ನಿಪಿ.3 ರ ಪ್ರಕಾರ ಭೂ ಸ್ವಾಧೀನ ಅಧಿಕಾರಿಗಳು ನನ್ನ ಅರ್ಜಿಯನ್ನು ವಜಾ ಮಾಡಿರುವುದು ಸರಿ ಎಂದರೆ ಸರಿಯಲ್ಲ.

4. ಮತ್ತೆ ನಿಪಿ.4 ರ ಪ್ರಕಾರ ನಾನು ಅರ್ಜಿಯನ್ನು ಕೊಟ್ಟಿರುತ್ತೇನೆ ಎನ್ನುವುದು ಸರಿ. ನಿಪಿ.5 ರ ಪ್ರಕಾರ ಭೂ ಸ್ವಾಧೀನ ಅಧಿಕಾರಿಗಳು ನನ್ನ ಅರ್ಜಿಯನ್ನು ವಜಾ ಮಾಡಿರುತ್ತಾರೆ, ಆದರೆ ಸರಿ ಇಲ್ಲ. 1:5 ರ ಅನುಪಾತದ ಅಡಿ ಸ್ವಾಧೀನವಾದ ನಮ್ಮ ಜಮೀನಿಗೆ ಭೂ ಸ್ವಾಧೀನ ಅಧಿಕಾರಿಗಳು ಪರಿಹಾರ ಹಣವನ್ನು ನೀಡಿರುತ್ತಾರೆ ಎಂದರೆ ಸರಿ. ಅ ಕಾರಣದಿಂದಲೂ ನಾನು ಹೆಚ್ಚಿನ ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ. ಹಾಗಾಗಿ ನಾನು ಅರ್ಜಿಯಲ್ಲಿ ಕೇಳಿರುವಂತೆ ಪರಿಹಾರ ಹೊಂದಲು ಅರ್ಹನಲ್ಲ ಎಂದರೆ ಸರಿಯಲ್ಲ.

(ನನ್ನ ಉ ಮೇ ತೆ ನ್ಯಾ ಬೆ ಮಾಡಲಾಯಿತು)

ಓ ಹೇ ಕೇ ಸ ಇ ಎ

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು